

ಸಂಪೂರ್ಣ ನಂಬಿಕೆ ಕಳೆದುಕೊಂಡು, ಪೂಜೆ–ಶ್ಲೋಕಗಳನ್ನೆಲ್ಲವನ್ನೂ ಮರೆತೇಬಿಟ್ಟಿದ್ದ ಸತೀಶ. ಆದರೆ ಆ ಸಂಸ್ಕಾರವನ್ನು ಈ ಏಕಾಂತದಲ್ಲಿ ಹಿಂತಿರುಗಿ ಕರೆದು, ಜೊತೆಯಲ್ಲಿ ನಿಲ್ಲಿಸಿಕೊಂಡು ಮನಸ್ಸಿನ ಗಟ್ಟಿತನ ಪಡೆಯಲು ತನ್ನನ್ನೇ ತಾನು ಸಿದ್ಧಗೊಳಿಸಿಕೊಳ್ಳತೊಡಗಿದ. ಸತೀಶನ ಹುಡುಕಾಟ ತೀವ್ರಗೊಂಡಂತೆಲ್ಲ, ಅದು ಹಗಲು ರಾತ್ರಿಯ 'ಓದು' ಆಯಿತು, ಗಂಭೀರ 'ಅಧ್ಯಯನ' ಆಯಿತು. ಘೋರ 'ತಪಸ್ಸು' ಆಯಿತು. ಈ ಓದು, ಅಧ್ಯಯನ, ತಪಸ್ಸುಗಳು ಅವನಿಗೆ, ಅವನನ್ನು ಭೂತಕ್ಕೆ ಕರೆದೊಯ್ದವು. ವರ್ತಮಾನದಲ್ಲಿ ಸುತ್ತಾಡಿಸಿದವು. ತನ್ನ ಸ್ವಂತದ ಬಗ್ಗೆಯೇ ಹೆಚ್ಚು ಹೆಚ್ಚು ತಿಳಿಸತೊಡಗಿದವು. ತನ್ನಿಂದ ಬೇರೆಯಲ್ಲದ, ಮಾಯೆಯನ್ನು ಮನಸ್ಸಾಗುಳ್ಳ ಬ್ರಹ್ಮನೇ ಇರಬೇಕು ಅದು ಎಂಬ ಅನುಮಾನ ತರಿಸಿದವು.

ತಿಳಿವು ಗಾಢವಾಗತೊಡಗಿದಂತೆಲ್ಲ, ಸತೀಶ ಸಂಪೂರ್ಣ ಬದಲಾಗತೊಡಗಿದ. ಅಗೋಚರನನ್ನು ಸರಿಯಾಗಿಯೇ ಪತ್ತೆ ಮಾಡಿತು ಅವನ ಮನಸ್ಸು. ಅದು ಅವನನ್ನು ಆಸ್ತಿ, ಪ್ರಶಸ್ತಿ, ಹಣ, ಹೊಗಳಿಕೆ, ಕೀರ್ತಿಗಳ ಬಯಕೆಯಿಂದ ದೂರ ದೂರಕ್ಕೆ ಎಳೆದೊಯ್ಯತೊಡಗಿತು. ಬಯಕೆ ಇರಲಿ ಅವುಗಳ ಬಗ್ಗೆ ಈಗ ಅಲಕ್ಷ್ಯ ಮೂಡತೊಡಗಿತ್ತು ಅವನಿಗೆ.

ಕೊನೆಗೂ ಪತ್ತೆಯಾಗಿಯೇ ಬಿಟ್ಟಿದ್ದ ಸತೀಶ ಹುಡುಕುತ್ತಿದ್ದ ಆ ಅಗೋಚರ! ಅದು ಹೊರಗಿನ ವ್ಯಕ್ತಿಯಲ್ಲ. ಅಂತರಂಗದ ಮೂಲೆಯಲ್ಲಿ ಕುಳಿತಿದ್ದ ಆಸೆ, ಅಪಕ್ವತೆ ಮತ್ತು ಅಹಂಗಳ ಸಮ್ಮಿಳಿತ ಸ್ವರೂಪ. ಸತೀಶನಿಗೇ ತಿಳಿಯದಂತೆ ಅಡಗಿ ಉಳಿದಿದ್ದ ಆಸೆಯ ತುಣುಕು. ಮಾಯೆಯ ಸಣ್ಣ ಎಳೆ. ಹಿಡಿಯ ಹೋದಾಗ ತನ್ನೊಳಗಿನ ಎದೆಯೊಳಗೆ ಸೇರಿ ಒಂದಾಗಿ ಹೋದ 'ನಾನು'. ಎರಡನ್ನೂ ಬೇರೆಯಾಗಿಸಿ ಅವನನ್ನು ಮಾತ್ರ ಹಿಡಿದು ಹೊರ ಹಾಕುವ ಪ್ರಯತ್ನದಲ್ಲಿ ತೊಡಗಿದ ಸತೀಶ. ಪುನಃ ಆರಂಭಗೊಂಡಿತು ಅಧ್ಯಯನ, ಆತ್ಮಾವಲೋಕನ, ತಪಸ್ಸು, ಶ್ರದ್ಧೆಯ ಪ್ರಯತ್ನ.

ಕಣ್ಣಿಗೆ ಕಾಣದಂತೆ, ಗ್ರಹಿಕೆಗೆ ಸಿಗದಂತೆ ಮಾಯವಾಗಿದ್ದ ಅವನು, ಪುನಃ ದೊರೆತಾಗ ತನ್ನೊಳಗಿನೊಳಗೆ ಬೆರೆತು ಬೇರ್ಪಡಿಸಲಾಗದಂತೆ ಏಕವಾಗಿದ್ದ. ಇನ್ನೊಮ್ಮೆ ಸಿಕ್ಕಿದ ಆ ಅವನು ಸಂಬಂಧಿಕನಲ್ಲ, ನಿಜವೆಂದರೆ ಅವನು ಅವನೇ ಅಲ್ಲ. ಅವಳೂ ಅಲ್ಲ, ಹೆಣ್ಣಲ್ಲ, ಗಂಡಲ್ಲ, ಪ್ರಾಣಿಯೂ ಅಲ್ಲ, ಪಕ್ಷಿಯೂ ಅಲ್ಲ. ಹಾಗೆಂದು ಜಡವೂ ಅಲ್ಲ. ಕೇಡು ಮಾಡುವ ವಸ್ತುವಲ್ಲ, ಏನೆಂದೇ ವರ್ಣಿಸಲಾಗದ ಒಂದು ದೃಷ್ಟಿಗೆ ದಕ್ಕದ ಹರಿದಾಟವದು. ಎಲ್ಲಿ ಯಾವಾಗ ಹೇಗೆ ಹರಿದಾಡುವುದೋ ತಿಳಿಯಲಾಗದಂತಹ ಒಂದು ಅದಮ್ಯ, ಅದ್ಭುತ ಚೈತನ್ಯ. ಅದು ಅಗ್ರಾಹ್ಯ, ಅವರ್ಣ, ಅಗೋತ್ರ, ಕೇವಲ ಅನುಭವಕ್ಕೆ ಮಾತ್ರ ದಕ್ಕುವ ಒಂದು ಅಗಾಧ ಶಕ್ತಿ. ಒಮ್ಮೆ ಜ್ಞಾನದ ಎಳೆಗೆ ಸಿಕ್ಕು, ಮನ ಹೊಕ್ಕರೆ ಬ್ರಹ್ಮಾಂಡದ ನೆಮ್ಮದಿಯನ್ನೆಲ್ಲ ಅಂತರಂಗದಲ್ಲಿ ಗಂಟುಕಟ್ಟಿ ಕೊಡುವ ಚೈತನ್ಯದ ಎಳೆ. ದೈಹಿಕ ಬಾಧೆಗಳನ್ನು, ಹೊರಗಿನ ಸಂಕಷ್ಟಗಳನ್ನು ಕಷ್ಟವೇ ಅಲ್ಲವೆಂದಾಗಿಸುವ ಅಮಿತ ತಾಳ್ಮೆಯ ಮಂತ್ರ. ಸುಲಭದಲ್ಲಿ ಸಿಕ್ಕದ ಜ್ಞಾನದ ಸೂತ್ರ. ಇಂಥ ಒಂದು ಅನುಭವಕ್ಕೆ ಮನಸ್ಸನ್ನು ಪಕ್ವಾಗಿಸಿದ್ದು, ಆ ಒಂದು ದಿನದಂದು, ವೇದಿಕೆಯ ಮೇಲೆ ಸತೀಶ ಬಳಸಿದ್ದ, ಎರಡು ಅನ್ಯನಿಂದನೆಯ ಪದಗಳು. ಸತೀಶ ಈಗೊಮ್ಮೆ ಆ ಪದಗಳಿಗೆ ಋಣಿಯಾಗಿ ವಂದಿಸಿದ.

ಆವರಿಸಿದ ಕತ್ತಲಲ್ಲಿ ಕೂತರೂ, ಬೆಳಕನ್ನು ಕಾಣುವ ಮಾರ್ಗ ಸತೀಶನಿಗೀಗ ತಿಳಿಯತೊಡಗಿತ್ತು. ಸುತ್ತ ಕಟ್ಟಿ ಹಾಕುವ ಸಮಸ್ಯೆಗಳ ನಡುವೆಯೂ, ಪರಿಹಾರಗಳ ದಾರಿ ಕಂಡುಕೊಳ್ಳುವ ಪರಿ ಗೊತ್ತಾಗತೊಡಗಿತ್ತು. ಮರ್ಯಾದೆ, ಅಂತಸ್ತು, ಕೀರ್ತಿ, ಆಸ್ತಿ, ಇತ್ಯಾದಿಗಳಿಲ್ಲದಿದ್ದರೂ ಅವೆಲ್ಲವನ್ನೂ ದಕ್ಕಿಸಿಕೊಂಡ ತೃಪ್ತಿಯನ್ನು ಮತ್ತು ಮನಃಶಾಂತಿಯನ್ನು ಅನುಭವಿಸುವ ಹೃದಯ ಅವನದಾಗಿ ಪರಿವರ್ತಿತಗೊಳ್ಳತೊಡಗಿತ್ತು.

ಕತ್ತಲ ಕೋಣೆಯಲ್ಲಿ ಸಣ್ಣ ದೀಪದ ಬೆಳಕಿನಲ್ಲಿ, ಶಾಂತಚಿತ್ತದಲ್ಲಿ ತಾನು ಕುಳಿತಿದ್ದೇನೆಂಬ ಅನಿಸಿಕೆಯಲ್ಲಿ, ದಿನೇ ದಿನೇ ಧ್ಯಾನಸ್ಥನಾಗತೊಡಗಿದ ಸತೀಶ, ಅಗೋಚರನ ತೆಕ್ಕೆಯೊಳಗೆ ಆನಂದಿಸುತ್ತ, ಸಮಾಧಾನದ ಕುಟೀರವನ್ನು ಪ್ರವೇಶಿಸಿದ್ದ. ಆತ್ಮದ ಅಧ್ಯಯನವನ್ನೇ ಧ್ಯಾನವಾಗಿಸುತ್ತ, ಧ್ಯಾನವನ್ನೇ ಬದುಕಾಗಿಸಿಕೊಳ್ಳುತ್ತ, 'ಓಂ'ಕಾರದ ಮೂಲಕ, ಉಳಿದೆಲ್ಲ ಅಹಮನ್ನೂ ಕರಗಿಸಲು ಪ್ರಯತ್ನಿಸುತ್ತ, ಅಗೋಚರನೊಳಗೆ ಲೀನವಾಗುವ ಪ್ರಯತ್ನಕ್ಕೆ ಇಳಿದ ಸತೀಶ.

**ಪ್ರತಿಕ್ರಿಯಿಸಿ: feedback@sudha.co.in**